**ದಿನಾಂಕ : *20-03-2025* ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರವಾಗಿ ಶ್ರೀ. ಆರ್ ಬಿ ಬಿ ವಕೀಲರಿಂದ**

ನಾನು ಈ ಕೆಳಕಂಡ ದಾಖಲೆಗಳನ್ನು ಗುರುತಿಸುತ್ತೇನೆ.

ನಿಪಿ-7 ಃ ಮೂಲ ಆಧಾರ ಕಾರ್ಡ

ಅರ್ಜಿಯಲ್ಲಿ ಕೋರಿರುವಂತೆ ಆದೇಶ ಮಾಡಬೇಕೆಂದು ಕೋರುತ್ತೇನೆ.

**ಪಾಟೀ ಸವಾಲು ಃ 1 ನೇ ಎದರುದಾರರ ಪರ ಶ್ರೀಮತಿ ಎಸ್ ಜಿ ಟಿ ವಕೀಲರಿಂದ**

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನು ನೀಡಿರುತ್ತೇನೆ. ನನ್ನ ಹೆಂಡತಿಯ ಹೆಸರು ಮುದುಕವ್ವ. ಘಟನೆ ನಡೆದ ದಿನ ನನ್ನ ಹೆಂಡತಿ ಹೂಲಗೇರಿ ಸಂಗಪ್ಪ ರವರ ಜಮೀನಿಗೆ ಕೆಲಸ ಮಾಡಲು ಹೋಗಿದ್ದಳು. ನನ್ನ ಹೆಂಡತಿ ಮತ್ತು ನನ್ನ ಚಿಕ್ಕಮ್ಮ ಸೇರಿ ಕೆಲಸಕ್ಕೆ ಹೋಗಿದ್ದರು. ಕೂಲಿ ಕೆಲಸ ಮುಗಿಸಿಕೊಂಡು ಟ್ರ್ಯಾಕ್ಟರದಲ್ಲಿ ವಾಪಸ್ಸು ಬರುತ್ತಿದ್ದರು. ಟ್ರ್ಯಾಕ್ಟರಿನ ಮಾಲೀಕರು 1 ನೇ ಎದರುದಾರರು. ಟ್ರ್ಯಾಕ್ಟರ ಚಾಲಕನ ಹೆಸರು ಶ್ರೀಕಾಂತ ಕರಂಡಿ. ಸದರಿ ಘಟನೆ ನಡೆದು 7 ವರ್ಷಗಳಾಯಿತು. ಘಟನೆ ಆದ ಸಂಜೆ 6.30 ಗಂಟೆ ಆಗಿತ್ತು. ಅಪಘಾತವಾದ ವಿಷಯವನ್ನು ನನ್ನ ಚಿಕ್ಕಮ್ಮ ತಿಳಿಸಿರುತ್ತಾರೆ. ಸದರಿ ಅಪಘಾತವು ಟ್ರ್ಯಾಕ್ಟರ ಚಾಲಕನ ನಿರ್ಲಕ್ಷತನದಿಂದ ಆಗಿರುತ್ತದೆ ಎಂದರೆ ಸರಿ. ಅಪಘಾತವಾದ ಸಂದರ್ಬದಲ್ಲಿ ವಿಮೆ ಇತ್ತು. ಟ್ರ್ಯಾಕ್ಟರ ಚಾಲಕನ ಡಿ ಎಲ್ ಇತ್ತು. ಡಿ ಎಲ್ ಮತ್ತು ವಿಮೆಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ . ಸದರಿ ಟ್ರ್ಯಾಕ್ಟರಗೆ ವಿಮೆ ಇರುವುದರಿಂದ 2 ನೇ ಎದರುದಾರರು ಪರಿಹಾರದ ಹಣವನ್ನು ಕೊಡಲು ಭಾದ್ಯಸ್ತರು ಎಂದರೆ ಸರಿ.

**ಪಾಟೀ ಸವಾಲು** ಃ 2 ನೇ ಎದರುದಾರರ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿರುತ್ತಾರೆ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ )

ಓ. ಹೇ. ಕೇ. ಸರಿ ಅದೆ.

PW-1

HANAMANTARAO R KULKARNI

Digitally signed by HANAMANTARAO R KULKARNI
Date: 2025.03.21 10:49:34 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ, ಹುನಗುಂದ.